2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಅ) ಕಾರ್ಯದರ್ಶಿ: ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಧೂಮಪಾನ ನಿಷೇದ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ವಿಧೇಯಕ, 2001ನ್ನು ಈ ಸಭೆಯ ಮುಂದಿಡುತ್ತೇನೆ. [X]

I (ಅ) ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಇಲಾಖೆ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ಅವರ ಹೆಸರಿನ ಮುಂದೆ ಇರುವ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1. 1964ರ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯ ಸೇವೆಗಳು (ನೇಮಕಾತಿ) ನಿಯಮಗಳನ್ನು ಪರಿಷ್ಕರಣೆ ಮಾಡಿ ಹೊಸದಾಗಿ ನಿಯಮಗಳನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ 14.06.2001ರಂದು ಹೊರಡಿಸಲಾದ ಡಿಪಿಎಆರ್: 18: ಎಸ್ಆರ್ಡಿ:99ನೇ ಸಂಖ್ಯೆಯ ಅಧಿಸೂಚನೆ;

2. 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, ಅನುಸೂಚಿ 2 ಮತ್ತು 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 02.06.2001ರಂದು ಹೊರಡಿಸಲಾದ ಡಿಪಿಎಆರ್: 23ಎಸ್ಡಿಇ: 23: ಎಸ್ಡಿಇ: 2000ನೇ ಸಂಖ್ಯೆ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಇಲಾಖೆ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರ ಪರವಾಗಿ, ಅವರ ಹೆಸರಿನ ಮುಂದೆ ಇರುವ

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ:

1. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿ (ವಿಳಂಬಕ್ಕೆ ಕಾರಣವಾದ ಟಿಪ್ಪಣಿಯೊಂದಿಗೆ);

2. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿ;

3. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರದ 2000-2001ನೇ ಸಾಲಿನ ವಾರ್ಷಿಕ ವರದಿ;

4. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ 1998-99 ಹಾಗೂ 1999-2000ನೇ

[X] ಅನುಬಂಧ-I